5. ವಿಷಯ : ಕಾರ್ಕಳ ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಆರ್.ಎಂ.ಎಸ್.ಎ. ಯೋಜನೆಯಡಿಯಲ್ಲಿ ಕಟ್ಟಡ ಕಾಮಗಾರಿಗಳಿಗೆ ಹಣ ಮಂಜೂರಾಗಿದ್ದರೂ ಕೂಡ ಕಾಮಗಾರಿ ಅಪೂರ್ಣವಾಗಿರುವ ಬಗ್ಗೆ.

ಶ್ರೀ ವಿ. ಸುನೀಲ್‌ಕುಮಾರ್ (ಕಾರ್ಕಳ):– ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನ ಆರ್.ಎಂ.ಎಸ್.ಎ. ಯೋಜನೆಯಡಿಯಲ್ಲಿ ನಿರ್ಮಾಣವಾಗುತ್ತಿರುವ ಪ್ರೌಢಶಾಲೆ ಮತ್ತು ಕಾಲೇಜು ಕಟ್ಟಡಗಳು ಅಪೂರ್ಣವಾಗಿ ತೊಂದರೆಯಾಗಿರುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು:– ಇದನ್ನು ನಂತರ ತೆಗೆದುಕೊಳ್ಳೋಣ.

ಶ್ರೀ ವಿ. ಸುನೀಲ್‌ಕುಮಾರ್:– ಈ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು:– ಇವತ್ತು ಇದ್ದರೆ ತೆಗೆದುಕೊಳ್ಳೋಣ. ಏಕೆಂದರೆ ನಾಳೆ ಒಂದು ಹೊರೆಯಷ್ಟು ಗಮನ ಸೆಳೆಯುವ ಸೂಚನೆಗಳಿವೆ.

ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ್:– ಉತ್ತರವನ್ನು ನಾಳೆ ಕೊಡಿಸುತ್ತೇನೆ.

ಅಧ್ಯಕ್ಷರು:– ಇದನ್ನು ನಾಳೆ ತೆಗೆದುಕೊಳ್ಳೋಣ. ಸಂಜಯ್ ಬಿ. ಪಾಟೀಲ್ ಸದನದಲ್ಲಿ ಹಾಜರಿಲ್ಲ, ಹೆಚ್.ಎನ್. ಪ್ರಕಾಶ್‌ರವರು ಸದನದಲ್ಲಿ ಹಾಜರಿಲ್ಲ.

6. ವಿಷಯ : ರಾಯಭಾಗ ತಾಲ್ಲೂಕು ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಮಳೆ ಮತ್ತು ಗಾಳಿಯಿಂದಾಗಿ ರೈತರು ಬೆಳೆದ ಬಾಳೆ ಬೆಳೆಗೆ ಆಗಿರುವ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ.

ಶ್ರೀ ಪಿ. ರಾಜೀವ್ (ಕೊಡಚಿ):– ಮಾನ್ಯ ಅಧ್ಯಕ್ಷರೆ, ರಾಯಭಾಗ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಇತ್ತೀಚಿನ ಮಳೆ ಮತ್ತು ಗಾಳಿಯಿಂದಾಗಿ ರೈತರು ಬೆಳೆದ ಬಾಳೆ ಬೆಳೆ ನಷ್ಟವಾಗಿದ್ದು, ಇಲ್ಲಿಯವರೆಗೆ ಪರಿಹಾರ ಕೊಟ್ಟಿಲ್ಲ. ನಾನು ಗಮನಸೆಳೆದ ನಂತರ ಸಚಿವರು ತಕ್ಷಣ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿದೆಯೆಂದು ಉತ್ತರ ಕೊಟ್ಟಿದ್ದಾರೆ. ನಾಳೆ–ನಾಡಿದ್ದರಲ್ಲಿ ಅವರಿಗೆ ಪರಿಹಾರ ಮುಟ್ಟುವುದಕ್ಕೆ ತಮ್ಮ ಮೂಲಕ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ಸಂದೇಶ ಹೋಗಲಿ. ಈಗ ಮಾನ್ಯ ಕಂದಾಯ ಸಚಿವರು ಸದನದಲ್ಲಿ ಇಲ್ಲ. ಅವರ ಪರವಾಗಿ ಮಾನ್ಯ ಕೃಷಿ ಸಚಿವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಾ ಅವರ ಗಮನ ಸೆಳೆಯಲಿಚ್ಛಿಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಕಂದಾಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಜಿಲ್ಲಾಧಿಕಾರಿಗಳಿಗೆ ತಕ್ಷಣ ಸೂಚನೆ ಕೊಟ್ಟು ಅದರ ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ಹೇಳುತ್ತೇನೆ. ರಾಯಬಾಗ ತಾಲ್ಲೂಕಿನಲ್ಲಿ ಮೇ 2015 ರ ತಿಂಗಳಿನಲ್ಲಿ ಮಳೆ ಗಾಳಿಗೆ 16.43 ಹೆಕ್ಟೇರ್ ಬಾಳೆ ಬೆಳೆ ಶೇ. 33 ಕ್ಕಿಂತ ಹೆಚ್ಚು ಹಾನಿಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಇನ್‌ಪುಟ್ ಸಬ್ಸಿಡಿಯನ್ನು ಪ್ರತಿ ಹೆಕ್ಟೇರ್‌ಗೆ ₹ 13,500/– ದಂತೆ ಬಳೆಹಾನಿಯಾದ ಅರ್ಹ ಸಂತ್ರಸ್ಥರಿಗೆ ₹ 2.21 ಲಕ್ಷ ಅನುದಾನವನ್ನು ಪ್ರಕೃತಿ ವಿಕೋಪದಡಿ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಅರ್ಹ ಸಂತ್ರಸ್ತರಿಗೆ ಇನ್‌ಪುಟ್ ಸಬ್ಸಿಡಿ ವಿತರಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿದೆ.

7. ವಿಷಯ : ಗ್ರಾಮಾಂತರ ಖಾತೆ ಸರಳೀಕರಣಕ್ಕೆ ಯೋಜನೆ ರೂಪಿಸುವ ಬಗ್ಗೆ.

ಶ್ರೀ ಬಿ.ವೈ. ರಾಘವೇಂದ್ರ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೆ, ಪಂಚತಂತ್ರ ವ್ಯವಸ್ಥೆಯಲ್ಲಿ ಇ–ಸ್ವತ್ತಿನಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದು, ಈ ದೃಷ್ಟಿಯಿಂದ ಇದನ್ನು ಸರಳೀಕರಣಗೊಳಿಸಬೇಕು. ಇದನ್ನು ಗ್ರಾಮಾಂತರ ಪ್ರದೇಶಕ್ಕೆ ಸೀಮಿತವಾಗಿ